ಮಾರ್ಗರೆಟ್ ಸಲಿಗೆಯಿಂದ ಕರೆದುಕೊಂಡು ಬರದಿದ್ದರೆ, ಬೆನ್ ಪರಿಚಯವಾಗುತ್ತಿರಲಿಲ್ಲವೆಂದು ಮನಸ್ಸಿನಲ್ಲಿಯೇ ಮಾರ್ಗರೆಟ್‌ಗೆ ಥ್ಯಾಂಕ್ಸ್ ಹೇಳಿಕೊಂಡಳು. ಬೆನ್‌ನಂಥ ಪಾಪ್ಯುಲರ್ ಫಿಗರ್ ತನ್ನ ಸನಿಹದಲ್ಲೇ ಇರುವನೆಂದು ಕೂಡಲೇ ಕ್ಷಣ ಮಾತ್ರವೂ ತಡಮಾಡದೇ, ಫೋಟೊ ತೆಗೆದುಕೊಂಡಳು. ಸೆಲ್ಫೀ ತೆಗೆದುಕೊಳ್ಳುತ್ತಿದ್ದರೆ, ಶ್ರಿಯಾಳ ಹೆಗಲಿನ ಮೇಲೆ ತಲೆಯೂರಿ ಒಂದು, ಸೊಂಟದಮೇಲೆ ಕೈ ಹಾಕಿ ಒಂದು, ಕಾಲಿನ ಹತ್ತಿರ ಕುಳಿತುಕೊಂಡು ಒಂದು... ಹೀಗೆ ಬಗೆಬಗೆಯ ಪೋಸ್‌ಗಳಿಂದ ನಗಿಸಿದ ಬೆನ್.

ಆ ಪಾರ್ಟಿಗೆ ಆ ರಾತ್ರಿಗೆ ಅದು ಸಾಕಿತ್ತು ಶ್ರಿಯಾಳಿಗೆ.

ರಾತ್ರಿಯಾಗುತ್ತ ಬಂತು. ಇನ್ನು ಹೊರಡಬೇಕೆಂದು ಶ್ರಿಯಾ ಆತುರಪಡಿಸಿದಾಗ ಮಾರ್ಗರೆಟ್, ಶ್ರೀಕರ್‌ಗಳು 'ಜಸ್ಟ್ ಫೈವ್ ಮೊರ್ ಮಿನಿಟ್ಸ್' ಎನ್ನುತ್ತಾ ಮತ್ತೊಂದು ಗಂಟೆ ತಡ ಮಾಡಿದರು. ಇನ್ನೂ ಸ್ವಲ್ಪ ಹೊತ್ತು ಇರಬೇಕೆಂದು ಬೆನ್ ಕೂಡಾ ಬೇಡಿಕೊಂಡ. ಶ್ರಿಯಾಳಿಗೆ ಹಸಿವೆಯಾಗಿದ್ದರಿಂದ ಮಾರ್ಗರೆಟ್‌ಗಾಗಿ ಕಾದು ನೋಡಿದರೆ ಪ್ರಯೋಜನವಿಲ್ಲವೆಂದು ಡಿನ್ನರ್ ಮಾಡಬೇಕೆಂದಳು. ಅವಳ ಸೊಂಟದ ಮೇಲೆ ಕೈಹಾಕಿ ಕಿಚನ್‌ಗೆ ಹೊರಡುವ ಪ್ರಯತ್ನ ಮಾಡಿದ ಬೆನ್.

ಕಿಚನ್ ಹತ್ತಿರಕ್ಕೆ ಬಂದಕೂಡಲೇ ಪಕ್ಕದಲ್ಲೇ ಇರುವ ಬೆಡ್ ರೂಮಿನೊಳಗೆ ಶ್ರಿಯಾಳನ್ನು ಎಳೆದುಕೊಂಡು ಹೋದ ಬೆನ್. ಒಂದು ಕ್ಷಣ ಏನು ನಡೆಯುತ್ತಿದೆ ಎಂದು ಶ್ರಿಯಾಳಿಗೆ ಅರ್ಥವಾಗಲಿಲ್ಲ. ಒತ್ತಾಯದಿಂದ ಮುತ್ತಿಡುತ್ತಿರುವ ಬೆನ್‌ನನ್ನು ಪಕ್ಕಕ್ಕೆ ತಳ್ಳಿಬಿಟ್ಟಳು, ಅಷ್ಟೇ. ಮತ್ತೊಬ್ಬ ಬೆನ್‌ನನ್ನು ನೋಡುವಂತಾಯಿತು. ಅವಳ ಕೆನ್ನೆಗಳ ಮೇಲೆ ಬಲವಾಗಿ ಹೊಡೆಯುತ್ತಾ, ಒಂದು ಕೈಯಿಂದ ಅವಳ ಬಾಯನ್ನು ಮುಚ್ಚಿದ. ಶಬ್ದ ಹೊರಗೆ ಬಾರದಂತೆ. ಸೆಣಸಾಡಿ ವಿಫಲವಾದಳು. ಪ್ರೀತಿಯಿಂದ ಇಬ್ಬರ ನಡುವೆ ನಡೆಯಬೇಕಾದ ಅಂದವಾದ ಸೇರಿಕೆ ಒಂದು ದುಃಸ್ವಪ್ನದಂತೆ ಮುಗಿಯಿತು.

ಆತ ಸ್ಕರ್ಟ್ ಎಳೆಯುತ್ತಿದ್ದಾಗ ಕಾಲುಗಳನ್ನು ಮುದುಡಿಕೊಳ್ಳಲು ವಿಫಲ ಪ್ರಯತ್ನ ಮಾಡಿದಳು. ಅವಳನ್ನು ಬಲವಂತವಾಗಿ ಆಕ್ರಮಿಸುತ್ತಿರುವ

